ಪುಟ್ಟಂಜ ತನ್ನ ಮಗಳನ್ನು ಎಲ್‌ಕೆಜಿಗೆ ಸೇರಿಸಲು ಪ್ರತಿಷ್ಠಿತ ಕಾನ್ವೆಂಟಿಗೆ ಹೋದ. ಅಲ್ಲಿನ ಮೇಡಂ ಸಂದರ್ಶನ ಮಾಡುತ್ತ, 'ಸಾರ್ ಆಲ್ಫಬೆಟ್ಸ್‌ನಲ್ಲಿ ಎಷ್ಟು ಅಕ್ಷರಗಳಿವೆ' ಎಂದು ಕೇಳಿದ. ಅದಕ್ಕೆ ಪುಟ್ಟಂಜ ಎ, ಎಲ್, ಪಿ, ಎಚ್, ಎ, ಬಿ, ಇ, ಟಿ, ಎಸ್ ಸೇರಿದ್ರೆ 'ಆಲ್ಫಬೆಟ್ಸ್' ಎಂದು ಮನದಲ್ಲೇ ಲೆಕ್ಕ ಹಾಕಿ 'ಒಂಬತ್ತು' ಎಂದ.

**ಕಂಡಕ್ಟರ್:** ಸರಿ ಸುಮಾರು ಮೂವತ್ತು ಕಿಲೋಮೀಟರ್‌ನಿಂದ ಫೋನಲ್ಲಿ ಮಾತಾಡ್ತಾನೆ ಇದೀರಾ, ಏನ್ ಸಾರ್ ಅಂಥ ವ್ಯವಹಾರ?
**ಪ್ರಯಾಣಿಕ:** ಫೋನ್‌ನಲ್ಲಿ ಮಾತಾಡ್ತಾ ಮಾತಾಡ್ತ ಕನ್ನಡ ಪ್ರಚಾರ ಮಾಡ್ತಿದ್ದೀನಿ ಸರ್!

**ಪುಟ್ಟಂಜ:** ಲೋ ನಂಜ, ಯಾವಾಗ್ಲೂ ಮೂರಕ್ಕಿಳಿಯಲ್ಲ, ಆರಕ್ಕೇರಲ್ಲ ಅಂತಿರ್ತೀಯಲ್ಲ ಹಂಗಂದ್ರೇನೊ?
**ನಂಜ:** ಮೂರು ಮತ್ತು ಆರರ ನಡುವೆ ಇರುವ ನಾಲ್ಕು, ಐದು ಈ ಸಂಖ್ಯೆಗಳು ಮೂರಕ್ಕಿಂತ ಕಡಿಮೆ ಆಗಲ್ಲ ಆರಕ್ಕಿಂತ ಹೆಚ್ಚು ಆಗಲ್ಲ.

**ಪ್ರೇಕ್ಷಕ:** ಏನ್ ಸಾರ್, ನಿಮ್ ಧಾರಾವಾಹಿ 'ಕರ್ಮಕಾಂಡ'ದ ಮುಖ್ಯ ಪಾತ್ರ ಶ್ರುತಿಗೆ ಅಪಘಾತ ಆಗಿದ್ದು ನ್ಯಾಯವೆ?
**ನಿರ್ದೇಶಕ:** ಆ ನಟಿ ಸಂಭಾವನೆ ಡಬಲ್ ಕೇಳಿದ್ರು. ಅದಕ್ಕೆ ಆ ಪಾತ್ರಕ್ಕೇ ಅಪಘಾತ ಮಾಡಿಸಿ, ಅಂತ್ಯ ಹಾಡಬೇಕಾಯಿತು.

**ಪುಟ್ಟಂಜ:** ಲೋ ನಂಜ, ಧರೆಗೆ ದೊಡ್ಡವರು ಯಾರು?
**ನಂಜ:** ಕಾನೂನು.
**ಪುಟ್ಟಂಜ:** ಅದ್ಹೇಗೊ?
**ನಂಜ:** ಮುಖ್ಯಮಂತ್ರಿಯೇ ಹೇಳಿಲ್ವಾ ಕಾನೂನಿಗಿಂತ ಯಾರು ದೊಡ್ಡವರಲ್ಲ ಅಂತ.







ಕಳ್ಳತನಕ್ಕೆ ಸಂಬಂಧಿಸಿದಂತೆ ಪಂಚಾಯ್ತಿ ಕಟ್ಟೆಯಲ್ಲಿ ಕೈ ಕಟ್ಟಿ ನಿಂತ ನಂಜನಿಗೆ ಎದುರಾದ ಪ್ರಶ್ನೆಯೊಂದು ಹೀಗಿತ್ತು.
**ಪುಟ್ಟಂಜ:** ಏನಪ್ಪ ನಂಜ, ಮುಂದೆ ಏನ್ಮಾಡಬೇಕು ಅಂತಿದ್ದೀಯಾ?
**ನಂಜ:** ನೀವು ನಾಕ್ ಮಂದಿ ಹ್ಯಾಂಗ್ ಹೇಳ್ತಿರೋ ಹಂಗೆ ಮಾಡ್ತೀನಿ.
**ಪುಟ್ಟಂಜ:** ನಾಲ್ಕು ಮಂದಿ ನಾಲ್ಕು ಹೇಳ್ತಾರೆ, ಅವಾಗೇನ್ ಮಾಡ್ತೀಯಾ?
**ನಂಜ:** ಆಗ, 'ನೀವೆಲ್ಲಾ ಒಮ್ಮತಕ್ಕೆ ಬರ್ರಿ' ಅಂತ ಹೇಳಿ ಹೊರಟೋಗ್ತೀನಿ.

ಕಚೇರಿಗೆ ಬಂದ ನಂಜನನ್ನ ಪುಟ್ಟಂಜ ಕೇಳಿದ್ದು ಹೀಗೆ...
**ಪುಟ್ಟಂಜ:** ಅಪ್ಪಣೆ ಇಲ್ಲದೆ ಪ್ರವೇಶ ಇಲ್ಲ ಅಂತ ಬೋರ್ಡ್ ಹಾಕಿದ್ರೂ ಯಾಕೆ ಒಳಗೆ ಬಂದ್ರಿ?
**ನಂಜ:** ಅಪ್ಪಣೆ ಪಡೆದುಕೊಳ್ಳೋಣ ಅಂತ.

**ಕಂಡಕ್ಟರ್:** ಸಾರ್ ನೀವು ಎಲ್ಲಿ ಇಳಿಯುತ್ತೀರಿ?
**ಪ್ರಯಾಣಿಕ:** ಫ್ರಂಟ್ ಡೋರಲ್ಲಿ.

**ಪುಟ್ಟಂಜ:** ಲೋ ನಂಜ, ನಿನ್ ಮಗ ಏನ್ ಓದ್ತಾ ಅವ್ನೆ?
**ನಂಜ:** ಪುಸ್ತಕ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ